ಮಂತ್ರಿಯವರ ಹೇಳಿಕೆ

ಬರಗಾಲ ಪ್ರದೇಶಗಳಲ್ಲಿ ಸಾಲ ವಸೂಲಿಗೆ ವಿನಾಯ್ತಿ ಕೊಡುವ ಬಗ್ಗೆ

ಶ್ರೀ ಆರ್, ಎಲ್. ಜಾಲಪ್ಪ.—ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಕೆಳಗಿನ ಹೇಳಿಕೆಯನ್ನು ಕೊಡುತ್ತೇನೆ,

೧೯೮೫-೮೬ರಲ್ಲಿ ರಾಜ್ಯದಲ್ಲಿ ಭೀಕರ ಬರಗಾಲ ಬಂದಿರುವುದರಿಂದ ರಾಜ್ಯದ ಬಹುಭಾಗದಲ್ಲಿ ಮಳೆ ಇಲ್ಲದೆ ಬೆಳೆಗಳು ಹಾನಿಗೊಳಗಾಗಿವೆ. ಬೆಳೆ ಹಾನಿಯಾದ ಬಗ್ಗೆ ಜಿಲ್ಲಾಧಿಕಾರಿಗಳು ಆಣೆವಾರಿ ಸರ್ಟಿಫಿಕೇಟುಗಳನ್ನು ಕೊಟ್ಟ ಮೇಲೆ, ಯಾವ ಯಾವ ಪ್ರದೇಶದಲ್ಲಿ ೬ ಆಣೆಗಿಂತ ಬೆಳೆ ಕಡಿಮೆಯಾಗಿದೆಯೋ ಆ ಪ್ರದೇಶದಲ್ಲಿ ಕೊಟ್ಟಿರುವ ಅಲ್ಪಾವಧಿ ಬೆಳೆ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸಲು ಸರ್ಕಾರ ನಿರ್ಧರಿಸಿದೆ. ಹಾಗೆ ಪರಿವರ್ತನೆ ಮಾಡುವಾಗ ಬಡ್ಡಿಯನ್ನು ಕೊಟ್ಟ ನಂತರವೇ ಪರಿವರ್ತನೆ ಆಗಬೇಕಿತ್ತು. ಈಗಾಗಲೇ ಸರ್ಕಾರ ಒಂದು ಆದೇಶವಿತ್ತು ಸಣ್ಣ ಮತ್ತು ಅತಿ ಸಣ್ಣ ರೈತರ ಸಾಲ ಪರಿವರ್ತನೆ ಮಾಡುವಾಗ ಈ ನಿರ್ಬಂಧ ಬೇಕಿಲ್ಲವೆಂದು ತಿಳಿಸಲಾಗಿದೆ. ಈ ಪುಣ್ಯೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಅಂತಹ ಹಾನಿಗೊಳಗಾದ ಸಣ್ಣ ಮತ್ತು ಅತಿ ಸಣ್ಣ ರೈತರು ೧೯೮೫-೮೬ರಲ್ಲಿ ಪಡೆದಿರುವ ಹಣದ ಮೇಲೆ ಈ ವರ್ಷ ಕೊಡಬೇಕಾದ ಬಡ್ಡಿಯನ್ನು ವಜಾ ಮಾಡಲಾಗುವುದೆಂದು ಪ್ರಕಟಿಸಿದ್ದಾರೆ,

ಆದರೆ ಇತರ ರೈತರ ಸಾಲ ಪರಿವರ್ತನೆ ಆಗಬೇಕಾದರೆ ಅವರು ಶೇಕಡ ೧೨½ ರಿಂದ ೧೪½ರಂತೆ ಬಡ್ಡಿ ಕೊಟ್ಟ ನಂತರವೇ ಅವರ ಸಾಲ ಪರಿವರ್ತನೆ ಮಾಡುವ ಕಾನೂನಿದೆ. ಈ ಮಾನೆಯ ಹಲವು ಸದಸ್ಯರು ಮತ್ತು ಬಹಳ ಮಂದಿ ಸಾಲಗಾರರೇ ಸಣ್ಣ ರೈತರಿಗೆ ಕೊಟ್ಟಿರುವಂತಹ ಸಾಲಭ್ಯಗಳನ್ನು ಕೊಡಬೇಕೆಂದು ಒತ್ತಾಯಿಸಿದ್ದಾರೆ. ಸರ್ಕಾರ ಇಂತಹ ಒತ್ತಾಯಗಳನ್ನು ಹಾಗೂ ದೊಡ್ಡ ರೈತರಿಗೆ ಆಗಿರುವ ತೊಂದರೆಗಳನ್ನು ಗಮನಿಸಿ ದೊಡ್ಡ ರೈತರ ಸಾಲ ಪರಿವರ್ತನೆ ಮಾಡಲು ಕೇವಲ ಶೇಕಡ ೭ರಂತೆ ಬಡ್ಡಿ ಕೊಟ್ಟರೆ ಬೆಳೆ ಸಾಲಗಳ ಪರಿವರ್ತನೆ ಮಾಡಲು ನಿರ್ಧರಿಸಿದೆ. ಉಳಿದ ಬಡ್ಡಿಯನ್ನು ಸಹಕಾರಿ ಸಂಘಗಳಿಗೆ ಸರ್ಕಾರ ತುಂಬಿ ಕೊಡಲು ತೀರ್ಮಾನಿಸಿದೆ. ತಾರೀಖು ೨೮-೨-೧೯೮೬ರೊಳಗಾಗಿ ಬಡ್ಡಿ ಕೊಟ್ಟು ಪರಿವರ್ತನೆ ಮಾಡಿಕೊಳ್ಳಲು ಸಮಯ ಸಾಲದುದರಿಂದ ಈ ರಿಯಾಯಿತಿಯನ್ನು ತಾರೀಖು ೩೧-೩-೧೯೮೬ರವರೆಗೆ ವಿಸ್ತರಿಸಲಾಗಿದೆ.

ಈ ಮೇಲ್ಕಂಡ ಸಾಲಭ್ಯಗಳು ಟ್ರ್ಯಾಕ್ಟರ್ ಇಟ್ಟುಕೊಂಡಿರುವವರಿಗೆ, ಆದಾಯ ತೆರಿಗೆ ಕೊಡುತ್ತಿರುವವರಿಗೆ ಹಾಗೂ ನಿರಂತರವಾದ ನೀರಿನ ಸೌಲಭ್ಯ ಇರುವವರಿಗೆ ದೊರೆಯುವುದಿಲ್ಲ.

೧೯೮೬-೮೭ನೇ ಸಾಲಿನ ಆಯವ್ಯಯ ಪತ್ರದ ಮೇಲಿನ ಸಾಮಾನ್ಯ ಚರ್ಚೆ

† ಶ್ರೀ ಜಿ. ಹೆಚ್ ಅಶ್ವತ್ಥ ರೆಡ್ಡಿ (ಜಗಳೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಕೃಷ್ಣ ಹೆಗಡೆಯವರು ೮೬-೮೭ನೇ ಸಾಲಿನ ಆಯವ್ಯಯ ಪತ್ರವನ್ನು ಸದನದ ಮುಂದೆ ಮಂಡನೆ ಮಾಡಿದ್ದಾರೆ. ನಾನು ಕೆಲವು ಕಾರಣಗಳಿಂದ ಈ ಆಯವ್ಯಯವನ್ನು ವಿರೋಧಿಸಬೇಕಾಗಿದೆ, ಮತ್ತೆ ಕೆಲವು ಸಲಹೆಗಳನ್ನು ಕೂಡ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಭೀಕರವಾದ ಬರಗಾಲ ಪರಿಸ್ಥಿತಿ ಇದ್ದು. ಅದನ್ನು ಎದುರಿಸುವುದಕ್ಕೆ ಸರ್ಕಾರ ನಾನಾ ಕಾರ್ಯಕ್ರಮಗಳನ್ನು ಹಾಕಿಕೊಂಡು ಆ ಮೂಲಕ ಎಲ್ಲರಿಗೂ ಉದ್ಯೋಗ ಕೊಡತಕ್ಕ ಭರವಸೆಯನ್ನು ಕೊಟ್ಟಿದೆ. ಆದರೆ, ಕೊಟ್ಟಂಥ ಭರವಸೆಯನ್ನು ಈಡೇರಿಸಿಲ್ಲ ಎನ್ನುವುದು ಸರ್ಕಾರದವರಿಗೂ ಕೂಡ ಗೊತ್ತಾಗಿದೆ. ಪ್ರತಿಯೊಂದು ತಾಲ್ಲೂಕಿನಲ್ಲಿ ಕೂಲಿಕಾರರ ಸಂಖ್ಯೆ ಎಷ್ಟಿದೆ ಎನ್ನುವುದನ್ನು ಗುರುತಿಸಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು ೪೦-೫೦ ಸಾವಿರ ಜನ ಕೂಲಿಕಾರರು ಇದ್ದಾರೆ. ಆದರೆ, ಸರ್ಕಾರದವರು ಕೆಲಸ ಕೊಟ್ಟಿರುವುದು ಕೇವಲ ೫-೬ ಸಾವಿರ ಜನರಿಗೆ ಮಾತ್ರ ಉಳಿದ ೩೫-೪೦ ಸಾವಿರ ಜನರಿಗೆ ಯಾವ ಉದ್ಯೋಗ ಇಲ್ಲದೆ ಬಹಳ ತೊಂದರೆ ಪಡುತ್ತಿದ್ದಾರೆ. ನ್ಯಾಯಬೆಲೆ ಅಂಗಡಿಗಳನ್ನು ಕೊಟ್ಟರೆ ಯಾವ ಪ್ರಯೋಜನ ಇದೆ ಜನಗಳಿಗೆ ಕೆಲಸ ಇಲ್ಲದೆ, ಕೊಳ್ಳುವಂಥ ಪರಿಸ್ಥಿತಿ ಇಲ್ಲದಿರುವಾಗ. ನ್ಯಾಯಬೆಲೆ ಅಂಗಡಿಗಳನ್ನು ಕೊಟ್ಟರೆ ಏನು ಉಪಯೋಗವಾಗುತ್ತದೆ. ಆಯವ್ಯಯ ಭಾಷಣದಲ್ಲಿ ಎಲ್ಲರಿಗೂ